# ದೃಷ್ಟಿದೋಷಕ್ಕೆ ಡಿಜಿಟಲ್ ಬೆಳಕು

**ದೃಷ್ಟಿ ದೌರ್ಬಲ್ಯ ಸಮಸ್ಯೆ (ಸಿವಿಐ) ಮಕ್ಕಳನ್ನು ಕಾಡುವ ಕಣ್ಣಿನ ತೊಂದರೆ. ಮೆದುಳಿನ ದೃಶ್ಯ ಸಂಬಂಧಿತ ನರದಲ್ಲಿ ಸಮಸ್ಯೆ ಉಂಟಾದಾಗ ಬರುವ ಸಿವಿಐ ಅನ್ನು ಆರಂಭಿಕ ಹಂತದಲ್ಲೇ ಪತ್ತೆ ಹಚ್ಚಿದರೆ ಸಂಪೂರ್ಣ ಗುಣಪಡಿಸಬಹುದು.**

**ಉಮಾ ಅನಂತ್**



ಆಂಧ್ರಪ್ರದೇಶದ ಚಿತ್ತೂರಿನ ಐದು ವರ್ಷದ ವೈಷ್ಣವಿಗೆ ದೃಷ್ಟಿ ಸಮಸ್ಯೆ. ಮಗು ಹುಟ್ಟುವ ಸಂದರ್ಭದಲ್ಲಿ ಮೆದುಳಿಗೆ ಆಮ್ಲಜನಕ ಸರಿಯಾಗಿ ಸರಬರಾಜಾಗದೇ ಇದ್ದುದರ ಪರಿಣಾಮ ಮಗು ಹುಟ್ಟಿದ ತಕ್ಷಣ ಅಳಲೇ ಇಲ್ಲ. ಇದರಿಂದ ಮೆದುಳಿನ ಹಿಂಭಾಗದಲ್ಲಿರುವ ಕಾರ್ಟಿಕಲ್ ವಲಯಕ್ಕೆ ತೊಂದರೆ ಉದ್ಭವಿಸಿತು. ಕಾರಣ ಮಗುವಿಗೆ ಚಿಕ್ಕ ವಯಸ್ಸಿನಲ್ಲೇ ದೃಷ್ಟಿದೋಷ ಬಂತು. ಬೆಂಗಳೂರಿನ ನಾರಾಯಣ ನೇತ್ರಾಲಯದಲ್ಲಿ ಚಿಕಿತ್ಸೆಗಾಗಿ ಕರೆತಂದಿದ್ದ ಪೋಷಕರು ಆಸ್ಪತ್ರೆಯಲ್ಲೇ ಮಗುವಿನ ಜೊತೆಗೆ ಸುಮಾರು ಆರು ತಿಂಗಳು ವಾಸ್ತವ್ಯ ಹೂಡಿ ಚಿಕಿತ್ಸೆ ಪಡೆದ ಬಳಿಕ ಮಗುವಿನ ಸಮಸ್ಯೆ ಸಂಪೂರ್ಣ ಪರಿಹಾರವಾಯಿತು.

ಹೌದು. ದೃಷ್ಟಿ ದೌರ್ಬಲ್ಯ ಸಮಸ್ಯೆ (ಕಾರ್ಟಿಕಲ್ ವಿಷುವಲ್ ಇಂಪೈರ್‌ಮೆಂಟ್–ಸಿವಿಐ) ಎಂಬುದು ಮಕ್ಕಳನ್ನು ಬಹುವಾಗಿ ಕಾಡುವ ನೇತ್ರ ಸಮಸ್ಯೆ. ಸಿವಿಐ ಎನ್ನುವುದು ಮೆದುಳಿನಲ್ಲಿ ದೃಶ್ಯಕ್ಕೆ ಸಂಬಂಧಿಸಿದ ಪ್ರದೇಶಗಳಲ್ಲಿ ಉಂಟಾಗುವ ದೃಷ್ಟಿಮಾಂದ್ಯ ಸ್ಥಿತಿ. ಭಾರತದಲ್ಲಿ ಒಂದು ಲಕ್ಷ ಮಕ್ಕಳಲ್ಲಿ 161 ಮಕ್ಕಳು ಈ ಸಮಸ್ಯೆ ಎದುರಿಸುತ್ತಿದ್ದು, ದಿನಕಳೆದಂತೆ ಈ ಸಂಖ್ಯೆಯಲ್ಲಿ ಹೆಚ್ಚಳವೂ ಕಂಡುಬರುತ್ತಿದೆ ಎನ್ನುವುದು ವೈದ್ಯಲೋಕದ ಕಳವಳ.

‘ಸಿವಿಐನಿಂದ ಮಕ್ಕಳ ಮೆದುಳಿನ ದೃಶ್ಯ ಸಂಬಂಧಿತ ನರದಲ್ಲಿ ಮಂದತೆ ಉಂಟಾಗುತ್ತದೆ. ಇದರಿಂದ ಮಕ್ಕಳು ದೃಶ್ಯವನ್ನು ಸರಿಯಾಗಿ ಗ್ರಹಿಸಲು ಸಾಧ್ಯವಾಗುವುದಿಲ್ಲ. ಇಂತಹ ಮಕ್ಕಳಿಗೆ ಚಿಕಿತ್ಸೆ ನೀಡಲೇಬೇಕಾಗುತ್ತದೆ’ ಎಂದು ಹೇಳುತ್ತಾರೆ ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ.ಭುಜಂಗ ಶೆಟ್ಟಿ ಅವರು.

‘ಬೆಂಗಳೂರಿನ ನಾರಾಯಣ ನೇತ್ರಾಲಯಕ್ಕೆ ತಿಂಗಳಿಗೆ 250ರಿಂದ 300 ಮಕ್ಕಳು

**ದೃಷ್ಟಿದೋಷ ನಿವಾರಣೆಗೆ ಆಕ್ಯುಪೇಷನಲ್ ಥೆರಪಿ, ಫಿಸಿಯೊಥೆರಪಿ, ಲೋ ವಿಷನ್ ಥೆರಪಿ ಹಾಗೂ ಟೆಲಿ ಟ್ರೀಟ್‌ಮೆಂಟ್ ಎಂಬ ನಾಲ್ಕು ತರದ ಚಿಕಿತ್ಸೆಗಳಿವೆ.**